

ಡಾ.ವಿನೋದ ಛೆಬ್ಬಿ

ಸಂಗಾತಿಯನ್ನು ಬಿಡುವವರು ಎಲ್ಲಿ ಹೋಗಲಿ ಎನ್ನುವುದರ ಬದಲು 'ಇಲ್ಲಿಂದ ದೂರ' ಹೋಗುವುದರ ಬಗೆಗೆ ಯೋಚಿಸಬೇಕು.

# 154: ಪರಸಂಬಂಧ- 17

ಗಂಡನು ಪರಸಂಬಂಧದಿಂದ ಹೊರಬರುವ ಸಂಭವವನ್ನು ಹೇಗೆ ಕಂಡುಹಿಡಿಯುವುದು ಎಂದು ಕಳೆದ ಸಲ ನೋಡಿದೆವು. ಅವನಿಂದ ಬಿಡುಗಡೆ ಹೊಂದಬೇಕು ಎಂದುಕೊಂಡರೂ ಅಭದ್ರತೆ, ಅಸುರಕ್ಷೆ ಹಾಗೂ ಒಂಟಿತನ ಎದುರಿಸಲು ಮನೋಬಲ ಸಾಲದೆ ಬೇಡದ ದಾಂಪತ್ಯಕ್ಕೆ ಅಂಟಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದೂ ಕಂಡುಕೊಂಡೆವು.

ಚರ್ಚೆಯನ್ನು ಮುಂದುವರಿಸುವುದಕ್ಕೆ ಮುಂಚೆ ಒಂದು ಮಾತು: ಇಲ್ಲಿ ನಾನು 'ಬಿಡುಗಡೆ' ಎಂಬ ಪದವನ್ನು ವಿಚ್ಛೇದನ (divorce) ಅಥವಾ ಕಾನೂನುಬದ್ಧ ಬೇರ್ಪಡುವಿಕೆಗೆ (judicial separation) ಬದಲಾಗಿ ಉಪಯೋಗಿಸುತ್ತಿಲ್ಲ. ಕಾನೂನುಬದ್ಧವಾಗಿ ಗಂಡನೊಡನೆ ಬಾಳಬೇಕೋ ಅಥವಾ ದಾಂಪತ್ಯವನ್ನು ಕಡಿದುಕೊಳ್ಳಬೇಕೋ ಎನ್ನುವುದು ನಮ್ಮ ವಿಷಯ ವ್ಯಾಪ್ತಿಯಲ್ಲಿ ಇಲ್ಲ. ಹಾಗೆಯೇ, ಪರಸಂಬಂಧ ನಡೆಯುತ್ತಿರುವಾಗ ವಾಸಿಸುವುದು ಗಂಡನೊಡನೆಯೋ ಅಥವಾ ಪ್ರತ್ಯೇಕವಾಗಿಯೋ ಎಂಬುದನ್ನೂ ಯೋಚಿಸುತ್ತಿಲ್ಲ. ನಮ್ಮ ಚಿಂತನೆಯು ಭಾವನಾತ್ಮಕ ಅವಲಂಬನೆಯ ಬಗೆಗೆ, ಹಾಗೂ ಅದರಿಂದ ಹೊರಬಂದು ಸ್ವತಂತ್ರವಾಗುವುದು ಹೇಗೆ ಎನ್ನುವುದರ ಬಗೆಗೆ ಮಾತ್ರ. ಯಾಕೆ? ಒಮ್ಮೆ ಭಾವನಾತ್ಮಕ ಸಂಬಂಧವನ್ನು ಕಡಿದುಕೊಂಡರೆ ವ್ಯಾವಹಾರಿಕ ಕ್ರಮಕ್ಕೆ ಬುದ್ಧಿ ತಾನೇ ಓಡುತ್ತದೆ. ಆದರೆ, ಭಾವನಾತ್ಮಕ ಬಾಂಧವ್ಯವನ್ನು ಕಡಿದು ಕೊಳ್ಳಬೇಕಾದರೆ ಹೆಣ್ಣು ಸಬಲೀಕರಣ ಹೊಂದುವುದು ಅಗತ್ಯವಾಗುತ್ತದೆ.

*ಹೆಣ್ಣಿನ ಸಬಲೀಕರಣ ಎಂದರೇನು? ಅದರಲ್ಲಿ ಏನೇನಿದೆ?*

ಒಂದು ಹೆಣ್ಣಿಗೆ ಸಮಾಜದ ಒಪ್ಪಿಗೆ, ಕಾನೂನಿನ ನೆರವು, ತನ್ನವರ ಸಹಾಯ, ಸಾಕಷ್ಟು ವಿದ್ಯಾರ್ಹತೆ, ಸ್ವಂತ ಆದಾಯ, ದೈವಾನುಗ್ರಹ – ಇವೆಲ್ಲ ಸಿಕ್ಕರೆ ಸಬಲಳಾದಂತೆ ಎನ್ನುವುದು ಎಲ್ಲರ ಅಭಿಮತ. ಆದರೆ ಇವೆಲ್ಲ ಸಿಗದಿರುವ, ಸಿಕ್ಕರೂ ಅಷ್ಟಕ್ಕಷ್ಟೇ ಆಗುವ ಸಂದರ್ಭಗಳೇ ಹೆಚ್ಚು. ಇವ್ಯಾವೂ ಸಿಗದಿದ್ದರೂ ಮುಂದಡಿ ಇಡಲು ಸಹಾಯ ಮಾಡುವುದು ಮನೋಬಲ ಮಾತ್ರ. ಅತ್ಯುತ್ತಮ ನಿರ್ಧಾರಗಳು ಅತ್ಯುತ್ತಮ ಮನೋಬಲದಿಂದಲೇ ಬರುತ್ತವೆ; ಮನೋಬಲ ಇಲ್ಲದಿದ್ದರೆ ಉಳಿದೆಲ್ಲ ಇದ್ದರೂ ನಿರ್ಧಾರ ಅಸಾಧ್ಯವಾಗುತ್ತದೆ. ಹಾಗಾಗಿ ಮನೋಬಲವನ್ನು ಬೆಳೆಸಿಕೊಳ್ಳುವುದೇ ಸಬಲೀಕರಣ ಎಂದು ನನಗೆ ಅನ್ನಿಸುತ್ತದೆ. ಆದರೆ ಸಾಮಾನ್ಯ ಹೆಣ್ಣೊಬ್ಬಳು ಗಂಡನನ್ನು ಬಿಟ್ಟುಹೋಗುವಂಥ ಸಾಹಸಕ್ಕೆ ಅಗತ್ಯವಾದ ಅಗಾಧ ಮನೋಬಲವನ್ನು ಪಡೆಯುವುದಾದರೂ ಹೇಗೆ? ಇದಕ್ಕೆ ಎರಡು ಮೂಲಗಳಿವೆ.

**1.** ಬದುಕಿನ ಮೌಲ್ಯಗಳು: ನಾವು ಅನುಸರಿಸಿಕೊಂಡು ಬರುವ ನೈತಿಕ ಮೌಲ್ಯಗಳಲ್ಲಿ ಎರಡು ವಿಧಗಳಿವೆ: ಅನುಕೂಲ ಮೌಲ್ಯಗಳು ಹಾಗೂ ಗಟ್ಟಿ ಮೌಲ್ಯಗಳು. ಉದಾಹರಣೆಗೆ, ಸುಳ್ಳು ಹೇಳಬಾರದು ಎನ್ನುವುದು ಒಂದು ಮೌಲ್ಯ. ಇನ್ನೊಬ್ಬರಿಗೆ ಒಳ್ಳೆಯದಾಗುವ ಹಾಗಿದ್ದರೆ ಸುಳ್ಳು ನಡೆಯುತ್ತದೆ ಎನ್ನುವುದು ಅನುಕೂಲ ಮೌಲ್ಯ. ಗಟ್ಟಿಮೌಲ್ಯಗಳು ಹಾಗಲ್ಲ. ಅವುಗಳ ಬಗೆಗೆ ರಾಜಿಯ ಮಾತೇ ಇಲ್ಲ. ಅವು ಹಾಲಿನಂತೆ– ಹನಿ ಹುಳಿ ಬಿದ್ದರೂ ಕೆಡುತ್ತವೆ. ಉದಾ. ಇನ್ನೊಬ್ಬರನ್ನು ಬಲಿ ಕೊಡಬಾರದು, ಮಕ್ಕಳನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳಬಾರದು ಇತ್ಯಾದಿ. ಇವುಗಳಲ್ಲಿ ಸ್ವಲ್ಪ ಬದಲಾವಣೆ ಆದರೂ ಮೌಲ್ಯ ಸೊನ್ನೆಯಾಗುತ್ತದೆ. ಉದಾಹರಣೆಗೆ, ಮೋಸ ಕೂಡದು ಎನ್ನುವುದು ರಾಜಿಗೆ ಒಳಪಡದಿದ್ದಲ್ಲಿ ಗಟ್ಟಿಮೌಲ್ಯ ಎನ್ನಿಸಿಕೊಳ್ಳುತ್ತದೆ. ಆದರೆ ನಷ್ಟದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಇನ್ನೊಬ್ಬರಿಗೆ ತೊಂದರೆಯಾಗದಂತೆ ಮೋಸ ಮಾಡಬಹುದು ಎನ್ನುವುದು ಮೌಲ್ಯವಾಗಲು ಸಾಧ್ಯವಿಲ್ಲ. ಇಲ್ಲಿ ದಶಕಗಳ ಹಿಂದೆ ಓದಿದ ಉದಾಹರಣೆ ನೆನಪಿಗೆ ಬರುತ್ತಿದೆ: ನಿಮ್ಮ ನೆರೆಯವರು ವರ್ಷಪೂರ್ತಿ ಪರವೂರಿಗೆ ಹೋಗುತ್ತಿದ್ದಾರೆ, ಹಾಗೂ ಒಂದು ನಿಲುವುಗನ್ನಡಿಯನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಳ್ಳಲು ಕೊಡುತ್ತಾರೆ ಎಂದುಕೊಳ್ಳಿ. ಅವರು ಬರುವ ತನಕ ಕನ್ನಡಿಯನ್ನು ಉಪಯೋಗಿಸಬಹುದು – ಅದೇನೂ ಸವೆಯುವುದಿಲ್ಲ – ಕೇಳಿದಾಗ ಮರಳಿ ಕೊಟ್ಟರಾಯಿತು ಎನ್ನುವುದು ಅನುಕೂಲ ಮೌಲ್ಯ; ಇತರರ ವಸ್ತುಗಳನ್ನು ಉಪಯೋಗಿಸುವುದು ನನ್ನ ನೀತಿಗೆ ಸಲ್ಲದು ಎಂದು ಕನ್ನಡಿಯನ್ನು ಬಟ್ಟೆಯಲ್ಲಿ ಸುತ್ತಿಟ್ಟು, ಕೇಳಿದಾಗ ಮರಳಿಸುವುದು ಗಟ್ಟಿಮೌಲ್ಯ.

ನೋವುಕೊಡುವ ಸಂಗಾತಿಯನ್ನು ತ್ಯಜಿಸಬೇಕೇ ಬೇಡವೇ ಎಂದು ನಿರ್ಧರಿಸುವುದರಲ್ಲಿ ಮನೋಬಲ ಬರುವುದು ಗಟ್ಟಿ ಮೌಲ್ಯಗಳಿಂದ ಮಾತ್ರ. ಉದಾಹರಣೆಗೆ, ಇನ್ನೊಬ್ಬಳ ಜೊತೆಗೆ ಶರೀರವನ್ನು (ಅಥವಾ ಪ್ರೀತಿಯನ್ನು) ಹಂಚಿಕೊಳ್ಳುತ್ತಿರುವ ವ್ಯಕ್ತಿಯ ಜೊತೆಗೆ ಬದುಕಬೇಕೇ ಎಂಬ ಮೌಲ್ಯಾಧಾರಿತ ಪ್ರಶ್ನೆ ಹಾಕಿಕೊಂಡರೆ ಸಿಗುವ ಉತ್ತರದಿಂದ ವಿಚಾರವು ನಿರ್ಧಾರವಾಗಿ ಬದಲಾಗುತ್ತದೆ. ಜಾನಿಸ್ ಸ್ಪ್ರಿಂಗ್ ಒಂದು ದೃಷ್ಟಾಂತ ನೀಡುತ್ತಾಳೆ. ಒಬ್ಬಳ ಗಂಡ ಆಫೀಸಿನ ಹುಡುಗಿಯ ಜೊತೆಗೆ ಸಂಬಂಧ ಇಟ್ಟುಕೊಂಡು, ಮನೆಗೆ ಬಂದಕೂಡಲೇ ಹೆಂಡತಿಯನ್ನೂ ಕೂಡುತ್ತಿದ್ದ. ಆತನ ಪರಸಂಬಂಧವು ಬಯಲಾದಾಗ ಅವಳಿಗೆ ನೆನಪಾಯಿತು: ಕೆಲವೊಮ್ಮೆ ಗಂಡನ ಆ ಭಾಗ ಅಂಟಾಗಿರುತ್ತಿತ್ತು! ಅದು ಯಾಕೆಂದು ಅರಿವಾದಾಗ ಛೀ ಎನ್ನಿಸಿ ಗಂಡನನ್ನು ಬಿಟ್ಟೇಬಿಟ್ಟಳು.

ಅನಿಶ್ಚಿತತೆಯಲ್ಲೂ ನಿರ್ಧಾರ: ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಮುಂಚೆ ಅದರ ಫಲಶ್ರುತಿ ಏನಾಗಬಹುದು ಎಂದು ಯೋಚಿಸುತ್ತೇವಷ್ಟೆ? ಈಗಿರುವುದನ್ನು ಬಿಟ್ಟು ಇನ್ನೊಂದಕ್ಕೆ ಹೊರಟರೆ ಇದಕ್ಕಿಂತ ಹೆಚ್ಚಿನದು ಸಿಗುತ್ತದೆ ಎಂಬುದಕ್ಕೆ ಏನು ಖಾತರಿ ಎಂಬ ಅಳುಕು ಅನೇಕರಿಗೆ ಬರುತ್ತದೆ. ಹೀಗೆ ಭದ್ರತೆ–ಸುರಕ್ಷತೆಯ ತೋಳತೆಕ್ಕೆಯಲ್ಲಿ ಸ್ವಾತಂತ್ರ್ಯದ ಅನ್ವೇಷಣೆ ಅಸಾಧ್ಯವಾಗಿ, ಬದುಕು ನಿಂತಲ್ಲೇ ನಿಂತುಬಿಡುತ್ತದೆ. ಆದುದರಿಂದ, 'ನಾನೀಗ ಹಿಡಿಯಲಿರುವ ಹಾದಿಯಿಂದ ನನಗೇನು ಸಿಗುತ್ತದೆ, ಹಾಗೂ ಅದು ಸುರಕ್ಷಿತವೆ?' ಎಂದಾಗದೆ, 'ನಾನೀಗ ಇರುವ ಸ್ಥಿತಿಯು ನನಗೆ ಸೂಕ್ತವೇ? ಇದು ನನಗೆ ಬೇಕೆ?' ಎನ್ನುವುದರ ಮೇಲೆ ನಿರ್ಧಾರವಾಗಬೇಕು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಹಿಂಸಿಸುವ ದಾಂಪತ್ಯದಿಂದ 'ಎಲ್ಲಿ ಹೋಗಲಿ?' ಎನ್ನುವುದರ ಬದಲು 'ಇಲ್ಲಿಂದ ದೂರ' ಹೋಗುವುದರ ಬಗೆಗೆ ಯೋಚಿಸಬೇಕು!

**2.** ಇಲ್ಲೊಂದು ಪ್ರಶ್ನೆ: ಗುರಿಯಿಲ್ಲದೆ ಪ್ರಯಾಣ ಹೇಗೆ ಸಾಧ್ಯ? ಇಲ್ಲೇ ವಿಶೇಷವಿದೆ. ಬದುಕಿನಲ್ಲಿ ಬಹುಶಃ ಯಾರೂ ತಾನಂದುಕೊಂಡ ಗುರಿಯನ್ನು ಮುಟ್ಟಲಾಗುವುದಿಲ್ಲ; ಮುಟ್ಟಿದರೆ ತಕ್ಷಣ ಇನ್ನಷ್ಟು ದೂರದಲ್ಲಿ ಹೊಸಗುರಿ ತಯಾರಾಗಿ ಆಹ್ವಾನ ಕೊಡುತ್ತದೆ. ಅನೇಕ ಸಲ ಒಂದು ಮಾಡಲು ಹೋಗಿ ಇನ್ನೊಂದು ಮಾಡಿಬಿಡುತ್ತೇವೆ. ಆಗ, "ಬಹುಶಃ ಇದೇ ನನ್ನ ಗುರಿಯಾಗಿತ್ತು, ಇದರಲ್ಲೇ ನೆಮ್ಮದಿಯಿದೆ." ಎಂದು ಅನಿಸುತ್ತದೆ. ಇಲ್ಲಾವುದೂ ಸರಿ ಅಥವಾ ತಪ್ಪು ಎಂದಿಲ್ಲ. ಇದು ಚದುರಂಗದ ಅಥವಾ ಕೇರಮ್ ಆಟದಂತೆ. ಒಂದು ನಡೆಯನ್ನು ನಡೆಸಿದರೆ ಸಿಗುವ ಫಲಿತಾಂಶವು ಇನ್ನೊಂದರಿಂದ ಸಿಗಲಾರದು. ಒಂದೊಂದು ಹಾದಿಯೂ ಒಂದೊಂದು ಕಡೆಗೆ ಕರೆದೊಯ್ಯುತ್ತದೆ. ಹಾಗೆ ಮುಟ್ಟಿದ್ದೇ ನಮ್ಮ ಗುರಿ! ಹಾಗಾಗಿ ಅನಿಶ್ಚಿತತೆಯ ಮುಖದಲ್ಲೇ ನಿರ್ಧಾರವನ್ನು ಕೈಗೊಳ್ಳುವುದೇ ವಿವೇಕ. ಉದಾಹರಣೆಗೆ, ಕೊಲಂಬಸ್ ಭಾರತವನ್ನು ಮುಟ್ಟಬೇಕೆಂದು ಹೊರಟು ಎಲ್ಲೋ ಮುಟ್ಟಿದ. ಅದು ಅಮೆರಿಕ ಎಂದು ನಂತರ ಗೊತ್ತಾಯಿತು. ಈಗ ಕೊಲಂಬಸ್ ಯಾರು ಎಂದರೆ ಅಮೆರಿಕವನ್ನು ಕಂಡುಹಿಡಿದವನು ಎನ್ನುತ್ತಾರೆಯೇ ಹೊರತು ಭಾರತವನ್ನು ಮುಟ್ಟುವುದರಲ್ಲಿ ಸೋತವನು ಎನ್ನುವುದಿಲ್ಲ! ಇಲ್ಲೊಬ್ಬಳು ಹಳ್ಳಿಯ ಹೆಂಗಸು ಕುಡುಕ ಗಂಡನ ಕಾಟ ತಾಳಲಾರದೆ ಮೂರು ಮಕ್ಕಳ ಜೊತೆಗೆ ಊರುಬಿಟ್ಟು ದೇವಸ್ಥಾನದ ಸೇವೆಗೆ ಸೇರಿಕೊಂಡಳು. ಅಲ್ಲಿಂದ ಮುಂದೆ ಇನ್ನೊಂದು ಊರು, ಮೂರನೆಯ ಊರು ಎಂದು ಬೆಂಗಳೂರು ಸೇರಿದಳು. ಈಗ ಏನಾಗಿದೆ? ಆಕೆಯ ಮೂವರೂ ಮಕ್ಕಳಲ್ಲಿ ಇಬ್ಬರು ವಿದೇಶದಲ್ಲಿದ್ದು, ಅಮ್ಮನಿಗೆ ಪ್ರೀತಿಯ ಸೆಲೆಯಾಗಿದ್ದಾರೆ. ವಿಶೇಷ ಏನೆಂದರೆ, ಹಳ್ಳಿಯನ್ನು ಬಿಡುವಾಗ ಆಕೆಗೆ ಈ ಗುರಿಯ ಕಲ್ಪನೆಯೂ ಇರಲಿಲ್ಲ. ಕ್ರೂರ ಗಂಡನಿಂದ ತಪ್ಪಿಸಿಕೊಂಡರೆ ಸಾಕು ಎನ್ನುವ ಉದ್ದೇಶ ಮಾತ್ರವಿತ್ತಷ್ಟೆ.